**ಸಾಕ್ಷಿಯನ್ನು ದಿಃ 18.09.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತಕ್ಕೆ ಸಂಬಂಧಿಸಿದಂತೆ ನಾನು ದೂರನ್ನು ದಾಖಲಿಸಿರುವುದಿಲ್ಲ. ದೂರನ್ನು ನಮ್ಮ ಪಕ್ಕದ ಮನೆಯ ಗಿರೀಶ್ ಎನ್ನುವವರು ದಾಖಲಿಸಿರುತ್ತಾರೆ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಗಿರೀಶ್ ರವರು ಅಪಘಾತದ ವಿಷಯವನ್ನು ನನಗೆ ತಿಳಿಸಿರುತ್ತಾರೆ. ಗಿರೀಶ್ ರವರನ್ನು ಸಾಕ್ಷ್ಯ ವಿಚಾರಣೆ ಮಾಡಲು ತೊಂದರೆ ಇಲ್ಲ. ಈ ಅಪಘಾತದಲ್ಲಿ ಮೂರು ವಾಹನಗಳು ಒಳಗೊಂಡಿದೆ ಎಂದು ದೂರಿನಲ್ಲಿ ಗಿರೀಶ್ ರವರು ತಿಳಿಸಿರುತ್ತಾರೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. ಆ ದಿನ ನನ್ನ ಯಜಮಾನರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರಿಗೆ ಹಿಂದಿನಿಂದ ಲಾರಿ ಡಿಕ್ಕಿ ಪಡಿಸಿರುತ್ತದೆ ಎಂದು ದೂರಿನಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಅದೇ ರೀತಿ ಎದುರುಗಡೆಯಿಂದ ಆಪೆ ಆಟೋ ಬಂದು ನನ್ನ ಯಜಮಾನರ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸಾಕ್ಷಿಯವರು ಲಾರಿಯವರ ತಪ್ಪು ಎಂದು ಉತ್ತರಿಸಿರುತ್ತಾರೆ. ಐ.ಎಂ.ವಿ ವರದಿಯಲ್ಲಿಯೂ ಸಹ ಮೂರು ವಾಹನಗಳಿಗೆ ಜಖಂ ಆಗಿದೆ ಎಂದು ಕಾಣಿಸಿರುತ್ತಾರೆ ಎಂದರೆ ಸಾಕ್ಷಿಯು ಲಾರಿಯವರ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಅಪಘಾತದಲ್ಲಿ ಮೂರು ವಾಹನ ಒಳಗೊಂಡಿದೆ ಎಂದು ದೂರಿನಲ್ಲಿ ನಮೂದಾಗಿದೆ ಎಂದರೆ ಸಾಕ್ಷಿಯು ಓದಿ ನೋಡಿ ಹೌದು ಎಂದು ಉತ್ತರಿಸಿರುತ್ತಾರೆ. ಆಪೆ ಆಟೋ ಮಾಲೀಕ ಮತ್ತು ವಿಮಾದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಆಟೋ ಗೆ ವಿಮೆ ಚಾಲ್ತಿಯಲ್ಲಿಲ್ಲದೆ ಇರುವ ಕಾರಣ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಗೊತ್ತಿಲ್ಲ. ಅಪಘಾತವು ಹುಣಸೂರು-ಕೆ.ಆರ್ ನಗರ ಮುಖ್ಯರಸ್ತೆಯಲ್ಲಿರುವ ಚಿಕ್ಕದಾಗನಹಳ್ಳಿ ಗೇಟ್ ಬಳಿ ಆಗಿರುತ್ತದೆ. ಆಟೋ ಚಾಲಕನನ್ನು 2 ನೇ ಆರೋಪಿಯನ್ನಾಗಿ ಕಾಣಿಸಿ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಆಪೆ ಆಟೋ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸದರಿ ಆಪೆ ಆಟೋವನ್ನು

ಪೋಲೀಸರು ವಶಪಡಿಸಿಕೊಂಡಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಅಪಘಾತದಲ್ಲಿ ಆಪೆ ಆಟೋ ಸಹ ಒಳಗೊಂಡಿದೆ ಎಂದರೆ ಸರಿಯಲ್ಲ. ಸ್ಥಳ ನಕ್ಷೆಯ ಬಗ್ಗೆ ನನಗೆ ಗೊತ್ತಾಗುವುದಿಲ್ಲ. ಸ್ಥಳ ನಕ್ಷೆಯ ಪ್ರಕಾರ ಆಟೋ ಎದುರುಗಡೆಯಿಂದ ಬಂದು ನನ್ನ ಯಜಮಾನರಿಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಲಾರಿ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಅಪಘಾತ ಆದ ರಸ್ತೆ ಮುಖ್ಯ ರಸ್ತೆ ಎಂದರೆ ಸರಿ. ಲಾರಿ ಎಡಬದಿಯಿಂದ ಬರುತ್ತಿತ್ತು ಎಂದರೆ ಸರಿ. ಆಪೆ ಆಟೋ ಬಲಗಡೆಯಿಂದ ಬರುತ್ತಿತ್ತು ಎಂದರೆ ಗೊತ್ತಿಲ್ಲ. ರಸ್ತೆಯ ಎಡ ಅಂಚಿನಿಂದ ಎಷ್ಟು ಅಂತರದಲ್ಲಿ ಅಪಘಾತ ಆಗಿದೆ ಎಂದು ನನಗೆ ಗೊತ್ತಿಲ್ಲ. ರಸ್ತೆಯ ಅಂಚಿನಿಂದ ಐದು ಅಡಿ ಅಂತರದಲ್ಲಿ ಅಪಘಾತ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ರಸ್ತೆಯು 18 ರಿಂದ 20 ಅಡಿ ಅಗಲದಾಗಿದ್ದು ಎಂದರೆ ಆ ಬಗ್ಗೆ ಗೊತ್ತಿಲ್ಲ. ಆಪೆ ಆಟೋ ರಸ್ತೆಯ ಅಂಚಿನಿಂದ ಐದು ಅಡಿ ಇರುವ ಜಾಗಕ್ಕೆ ಬಂದು ಅಪಘಾತ ಪಡಿಸಿರುತ್ತದೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಅಪಘಾತವು ಆಟೋ ಚಾಲಕನ ತಪ್ಪಿನಿಂದ ಆಗಿರುವ ಕಾರಣ ಸದರಿ ಆಟೋ ಮಾಲೀಕ ಮತ್ತು ವಿಮೆದಾರರನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಗೊತ್ತಾದ ಮೇರೆಗೆ ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಅಪಘಾತವು ರಾತ್ರಿ 07.30 ಗಂಟೆಗೆ ಆಗಿರುತ್ತದೆ. ಆಪೆ ಆಟೋ ಚಾಲಕ ಮತ್ತು ವಿಮೆದಾರರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಮೃತರು ಮೀನು ಹಿಡಿಯುವ ಕೆಲಸ ಮತ್ತು  ಕೂಲಿ ಕೆಲಸ ಮಾಡುತ್ತಿದ್ದರು. ತಿಂಗಳಿಗೆ ರೂ. 25 ರಿಂದ  30 ಸಾವಿರ ಸಂಪಾದನೆ ಮಾಡುತ್ತಿದ್ದರು. ಕೆ.ಆರ್.ಎಸ್ ಡ್ಯಾಂ ನಲ್ಲಿ ಮೀನು ಹಿಡಿಯುತ್ತಿದ್ದರು. ಆ ಬಗ್ಗೆ ದಾಖಲೆ ಇಲ್ಲ. ಮೀನು ಹಿಡಿಯಲು ಮೃತರಿಗೆ ಲೈಸೆನ್ಸ್ ಇತ್ತು. ಸದರಿ ಲೈಸೆನ್ಸ್ ಎಲ್ಲಿದೆ ಎಂದು ಈಗ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಯಜಮಾನರಿಗೆ ತಲೆಗೆ ಏಟಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ.

ಮೃತರಿಗೆ 37 ವರ್ಷ ವಯಸ್ಸಾಗಿತ್ತು. ನನಗೆ 33 ವರ್ಷ ವಯಸ್ಸು. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಆಧಾರ್ ಕಾರ್ಡ್ ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಹೆಚ್ಚಿನ ಪರಿಹಾರಕ್ಕಾಗಿ ಮೃತರ ಆದಾಯದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಅರ್ಜಿದಾರರು ನನ್ನ ಮಕ್ಕಳು ಮತ್ತು 4 ನೇ ಅರ್ಜಿದಾರರು ನನ್ನ ಅತ್ತೆ ಎಂದು ತೋರಿಸಲು ವಂಶವೃಕ್ಷ ಹಾಜರು ಪಡಿಸಿರುವುದಿಲ್ಲ. ಆಧಾರ್ ಕಾರ್ಡ್ ನಲ್ಲಿ ನಾವು ಮೃತರ ಕುಟುಂಬದವರು ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ನನ್ನ ಯಜಮಾನರು ಚಲಾಯಿಸಿಕೊಂಡು ಹೋಗುತ್ತಿದ್ದ ಮೋಟಾರ್ ಸೈಕಲ್ ಅವರಿಗೆ ಸೇರಿದ್ದು ಸದರಿ ಮೋಟಾರ್ ಸೈಕಲ್ ನ ವಿಮೆದಾರರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಹಾಗಾಗಿ ನಾವು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.